**ಕರ್ನಾಟಕ ರಾಜ್ಯ ಅತಿಸಣ್ಣ ಮತ್ತು ಸಣ್ಣ ಉದ್ದಿಮೆಗಳ ಸಹಾಯ ಸೌಲಭ್ಯ ಪರಿಷತ್ತಿನ ನಿಯಮಗಳು, 2007**

**(ಕರ್ನಾಟಕ ರಾಜ್ಯಪತ್ರ, ಗುರುವಾರ, ಡಿಸೆಂಬರ್ 4, 2008, ಭಾಗ – IVಎ, 1105 ರಿಂದ 1107ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ)**

**ಸಂ: ಸಿಐ 377 ಸಿಎಸ್‌ಸಿ 06, ಬೆಂಗಳೂರು, ದಿನಾಂಕ: 7ನೇ ಮಾರ್ಚ್ 2007**

ಅತಿಸಣ್ಣ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ ಅಧಿನಿಯಮ, 2006 (2006ರ ಕೇಂದ್ರ ಅಧಿನಿಯಮ 27ರ)ರ 21ನೇ ಪ್ರಕರಣದ (3)ನೇ ಉಪಪ್ರಕರಣದ ಜೊತೆ ಓದಿಕೊಳ್ಳಲಾದ 30ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮುಂದಿನ ನಿಯಮಗಳನ್ನು ರಚಿಸುತ್ತದೆ. ಎಂದರೆ,–

**ಪ್ರಾರಂಭಿಕ**

**1. ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ರಾಜ್ಯ ಅತಿಸಣ್ಣ ಮತ್ತು ಸಣ್ಣ ಉದ್ದಿಮೆಗಳ ಸಹಾಯ ಸೌಲಭ್ಯ ಪರಿಷತ್ತಿನ ನಿಯಮಗಳು, 2007 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಜಾರಿಯಲ್ಲಿ ಬರತಕ್ಕದ್ದು.

**2. ಪರಿಭಾಷೆ.–** (1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧಿನಿಯಮ" ಎಂದರೆ ಅತಿಸಣ್ಣ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ ಅಧಿನಿಯಮ, 2006 (2006ರ ಕೇಂದ್ರ ಅಧಿನಿಯಮ 27);

(ಬಿ) "ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ" ಎಂದರೆ ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996 (1996ರ ಕೇಂದ್ರ ಅಧಿನಿಯಮ, 26);

(ಸಿ) "ಅಧ್ಯಕ್ಷರು" ಎಂದರೆ ಅಧಿನಿಯಮದ 21ನೇ ಪ್ರಕರಣದ (1)ನೇ ಉಪ–ಪ್ರಕರಣದ (೧)ನೇ ಖಂಡದ ಅಡಿಯಲ್ಲಿ ನೇಮಕಗೊಂಡ ಪರಿಷತ್ತಿನ ಅಧ್ಯಕ್ಷರು;

(ಡಿ) "ಪರಿಷತ್ತು" ಎಂದರೆ ರಾಜ್ಯ ಸರ್ಕಾರವು ಅಧಿನಿಯಮದ 20ನೇ ಪ್ರಕರಣದಡಿಯಲ್ಲಿ ಸ್ಥಾಪಿಸಿದ ಅತಿಸಣ್ಣ ಮತ್ತು ಸಣ್ಣ ಉದ್ದಿಮೆಗಳ ಸಹಾಯ ಸೌಲಭ್ಯ ಪರಿಷತ್ತು;

(ಇ) "ಸರ್ಕಾರ" ಎಂದರೆ ಕರ್ನಾಟಕ ಸರ್ಕಾರ;

(ಎಫ್) "ಸಂಸ್ಥೆ" ಎಂದರೆ ಅಧಿನಿಯಮದ 18ನೇ ಪ್ರಕರಣದ (2) ಮತ್ತು (3)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ಪರ್ಯಾಯ ವಿವಾದ ಪರಿಹಾರ ಸೇವೆಗಳನ್ನು ಒದಗಿಸುವ ಸಂಸ್ಥೆ ಅಥವಾ ಕೇಂದ್ರ;

(ಜಿ) "ಸದಸ್ಯ" ಎಂದರೆ ಪರಿಷತ್ತಿನ ಸದಸ್ಯ;

(ಎಚ್) "ಪ್ರಕರಣ" ಎಂದರೆ ಅಧಿನಿಯಮದ ಪ್ರಕರಣ.

(2) ಈ ನಿಯಮಗಳಲ್ಲಿ ಬಳಸಿರುವ ಆದರೆ ಪರಿಭಾಷಿಸಿಲ್ಲದ ಪದಗಳು ಮತ್ತು ಅಭಿವ್ಯಕ್ತಿಗಳು, ಅಧಿನಿಯಮದಲ್ಲಿ ಅವುಗಳಿಗೆ ನಿರ್ದಿಷ್ಟಪಡಿಸಿರುವ ಅರ್ಥವನ್ನೇ ಹೊಂದಿರತಕ್ಕದ್ದು.

**3. ಪರಿಷತ್ತಿಗೆ ನೇಮಕಾತಿ ಮಾಡುವ ವಿಧಾನ.–** (1) ಸರ್ಕಾರವು ಅಧಿಸೂಚನೆಯ ಮೂಲಕ 21ನೇ ಪ್ರಕರಣದ (1)ನೇ ಉಪಪ್ರಕರಣದ (ii), (iii) ಅಥವಾ (iv)ನೇ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಪ್ರತಿನಿಧಿಗಳನ್ನು ಪರಿಷತ್ತಿಗೆ ಸದಸ್ಯರನ್ನಾಗಿ ನೇಮಿಸತಕ್ಕದ್ದು.

(2) ಪರಿಷತ್ತಿನ ಒಬ್ಬ ಸದಸ್ಯನು ನಿಧನ ಹೊಂದಿದರೆ ಅಥವಾ ರಾಜೀನಾಮೆ ನೀಡಿದರೆ ಅಥವಾ ರಾಜೀನಾಮೆ ನೀಡಿದ್ದಾನೆ ಎಂದು ಭಾವಿಸಿದರೆ ಅಥವಾ ಆತನನ್ನು ಪದದಿಂದ ತೆಗೆದು ಹಾಕಿದರೆ ಅಥವಾ ಆತನು ಸದಸ್ಯನಾಗಿ ಕಾರ್ಯನಿರ್ವಹಿಸಲು ಅಸಮರ್ಥನಾದರೆ, ಸರ್ಕಾರವು ಆ ರಿಕ್ತ ಸ್ಥಾನವನ್ನು ತುಂಬಲು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ ಒಬ್ಬನನ್ನು ನೇಮಕ ಮಾಡಬಹುದು.

(3) ಅಧ್ಯಕ್ಷನನ್ನು ಹೊರತುಪಡಿಸಿ, ಒಬ್ಬ ಸದಸ್ಯನು ಅವನು ನೇಮಕಗೊಂಡ ದಿನಾಂಕದಿಂದ ಎರಡು ವರ್ಷಗಳಿಗೆ ಮೀರದ ಅವಧಿಯವರೆಗೆ ಪದವನ್ನು ಧಾರಣ ಮಾಡಿರತಕ್ಕದ್ದು.

(4) (1)ನೇ ಉಪನಿಯಮದ ಅಡಿಯಲ್ಲಿ ನೇಮಕಗೊಂಡ ಒಬ್ಬ ಸದಸ್ಯನು, ಯಾವ ಪ್ರವರ್ಗ ಅಥವಾ ಹಿತಾಸಕ್ತಿಯಿಂದ ಪರಿಷತ್ತಿಗೆ ನೇಮಕಗೊಂಡಿದ್ದನೋ ಅದನ್ನು ಪ್ರತಿನಿಧಿಸಲು ತಪ್ಪಿದಲ್ಲಿ ಅವನು ಪರಿಷತ್ತಿನ ಸದಸ್ಯನಾಗಿರುವುದು ನಿಂತುಹೋಗತಕ್ಕದ್ದು.

(5) ಪರಿಷತ್ತಿನ ಸದಸ್ಯನು ಒಂದು ತಿಂಗಳು ಮುಂಚಿತವಾಗಿ ಸರ್ಕಾರಕ್ಕೆ ಲಿಖಿತ ನೋಟೀಸು ನೀಡಿ ರಾಜೀನಾಮೆ ಸಲ್ಲಿಸುವ ಮೂಲಕ ಪರಿಷತ್ತಿಗೆ ರಾಜೀನಾಮೆ ನೀಡಬಹುದು ಸದಸ್ಯನ ರಾಜೀನಾಮೆಯನ್ನು ಅಂಗೀಕರಿಸುವ ಅಧಿಕಾರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು. ಸರ್ಕಾರವು ಅದನ್ನು ಅಂಗೀಕರಿಸಿದ ದಿನಾಂಕದಿಂದ ಅದು ಜಾರಿಯಲ್ಲಿ ಬರತಕ್ಕದ್ದು.

(6) ಸರ್ಕಾರವು ಯಾರೇ ಸದಸ್ಯನನ್ನು,–

(ಎ) ಅವನು ಅಸ್ವಸ್ಥಚಿತ್ತನಾಗಿದ್ದರೆ ಅಥವಾ ಒಂದು ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿಸಲಾಗಿದ್ದರೆ; ಅಥವಾ

(ಬಿ) ಅವನು ಸಾಲ ತೀರಿಸಲು ಅಸಮರ್ಥನಾದರೆ, ಅಥವಾ ದಿವಾಳಿಯಾಗಿದ್ದರೆ ಅಥವಾ ಸಾಲ ನೀಡಿದವರಿಗೆ ಹಣ ಪಾವತಿ ಮಾಡುವುದನ್ನು ನಿಲ್ಲಿಸಿದ್ದರೆ; ಅಥವಾ

(ಸಿ) ನೈತಿಕ ಅಧಃಪತನವನ್ನು ಒಳಗೊಳ್ಳುವ ಯಾವುದೇ ಅಪರಾಧದ ದೋಷಿಯಾಗಿದ್ದರೆ; ಅಥವಾ

(ಡಿ) ಅವನು ಅಧ್ಯಕ್ಷನ ಅನುಮತಿ ಪಡೆಯದೆ ಸತತವಾಗಿ ಪರಿಷತ್ತಿನ ಮೂರು ಸಭೆಗಳಿಗೆ ಮತ್ತು ಯಾವುದೇ ಸಂದರ್ಭದಲ್ಲಿ ಸತತವಾಗಿ 5 ಸಭೆಗಳಿಗೆ ಮೀರದಂತೆ ಗೈರು ಹಾಜರಾದರೆ; ಅಥವಾ

(ಇ) ಸರ್ಕಾರದ ಅಭಿಪ್ರಾಯದಲ್ಲಿ ಸದಸ್ಯನಾಗಿ ಅವನ ಕರ್ತವ್ಯನಿರ್ವಹಣೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡುವ ಸಂಭವವಿರುವ ಆರ್ಥಿಕ ಅಥವಾ ಬೇರೆ ಹಿತಾಸಕ್ತಿಯನ್ನು ಅರ್ಜಿಸಿದರೆ

– ಪರಿಷತ್ತಿನಿಂದ ತೆಗೆದುಹಾಕಬಹುದು.

**4. ಪರಿಷತ್ತಿನ ಕಾರ್ಯವಿಧಾನ.–** (1) ಪರಿಷತ್ತು ಕಡೇ ಪಕ್ಷ ತಿಂಗಳಿಗೆ ಒಂದು ಸಲ ಸಭೆ ಸೇರತಕ್ಕದ್ದು.

(2) ಸಾಮಾನ್ಯವಾಗಿ ಯಾವುದೇ ಸಭೆಗೆ 7 ದಿನಗಳಷ್ಟು ಮುಂಚಿತವಾಗಿ ನೋಟೀಸನ್ನು ನೀಡತಕ್ಕದ್ದು. ಆದರೆ ತುರ್ತು ಸಂದರ್ಭದಲ್ಲಿ ಅಧ್ಯಕ್ಷನು ಪರ್ಯಾಪ್ತವೆಂದು ಪರಿಗಣಿಸುವಂತಹ ಕಡಿಮೆ ಅವಧಿಯ ನೋಟೀಸನ್ನು ನೀಡಿ ಸಭೆಯನ್ನು ಕರೆಯಬಹುದು.

(3) ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996ರ 26ನೇ ಪ್ರಕರಣದ ನಿಬಂಧನೆಗಳಿಗನುಸಾರವಾಗಿ ಪರಿಷತ್ತು ಒಬ್ಬರು ಅಥವಾ ಅನೇಕ ತಜ್ಞರನ್ನು ನೇಮಿಸಿಕೊಳ್ಳಬಹುದು ಅಥವಾ ಅವರ ಸೇವೆಯನ್ನು ಪಡೆಯಬಹುದು.

(4) ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996ರ 27ನೇ ಪ್ರಕರಣದಡಿಯಲ್ಲಿ ಪರಿಷತ್ತು ಅಥವಾ ಪರಿಷತ್ತಿನ ಅನುಮೋದನೆ ಮೇರೆಗೆ, ವಿವಾದದ ಪಕ್ಷಕಾರರು ಸಾಕ್ಷ್ಯ ಪಡೆಯಲು ನೆರವಿಗಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು.

(5) ಬಾಧಿತನಾದ ಅತಿಸಣ್ಣ ಅಥವಾ ಸಣ್ಣ ಉದ್ಯಮ ಪೂರೈಕೆದಾರನ (ಇದರಲ್ಲಿ ಇನ್ನು ಮುಂದೆ ಅರ್ಜಿದಾರನೆಂದು ಉಲ್ಲೇಖಿಸಲಾಗಿದೆ) ಉಲ್ಲೇಖ ಅಥವಾ ಅರ್ಜಿಯಲ್ಲಿ ಪೂರೈಕೆದಾರನ ಪೂರ್ಣ ವಿವರ ಹಾಗೂ ಸ್ಥಾನಮಾನ, ಪೂರೈಕೆ ಮಾಡಲಾದ ಸರಕುಗಳು ಅಥವಾ ಸೇವೆಗಳು, ಪೂರೈಕೆದಾರ ಹಾಗೂ ಖರೀದಿದಾರನ ನಡುವೆ ಸಂದಾಯದ ಕುರಿತು ಮಾಡಿಕೊಂಡ ಒಪ್ಪಂದದ ನಿಬಂಧನೆಗಳೇನಾದರೂ ಇದ್ದರೆ ಅವು, ಸ್ವೀಕರಿಸಿದ ವಾಸ್ತವಿಕ ಸಂದಾಯ ಹಾಗೂ ದಿನಾಂಕದ ನಮೂದು, ಬಾಕಿ ಇರುವ ಮೊಬಲಗು ಮತ್ತು ಅಧಿನಿಯಮದ 16ನೇ ಪ್ರಕರಣದಡಿಯಲ್ಲಿ ಯುಕ್ತವಾಗಿ ಲೆಕ್ಕ ಹಾಕಲಾದ ಬಡ್ಡಿ ವಿವರಗಳಿದ್ದು ಅದರೊಂದಿಗೆ ಅದನ್ನು ಸಮರ್ಥಿಸುವ ಅಫಿಡವಿಟ್ಟು ಹಾಗೂ ಅಗತ್ಯ ನ್ಯಾಯಾಲಯ ಶುಲ್ಕ ಇರತಕ್ಕದ್ದು. ಪರಿಷತ್ತಿನ ಅಧ್ಯಕ್ಷನು, ವ್ಯವಹರಣೆಗಳ ಉದ್ದೇಶಕ್ಕಾಗಿ ಆತನು ಅಗತ್ಯವೆಂದು ಪರಿಗಣಿಸಬಹುದಾದಂತೆ ಕ್ಲೇಮಿನ ಬಗ್ಗೆ ಮತ್ತಷ್ಟು ವಿವರಗಳನ್ನು ಅಥವಾ ಕ್ಲೇಮಿನ ಬೆಂಬಲವಾಗಿ ಯಾವುದೇ ತತ್ಸಂಬಂಧಿ ದಸ್ತಾವೇಜುಗಳನ್ನು ಒದಗಿಸುವಂತೆ ಅರ್ಜಿದಾರನಿಗೆ ಅಗತ್ಯಪಡಿಸಬಹುದು. ಅರ್ಜಿದಾರನು ಅಂಥ ಮಾಹಿತಿ ಸ್ವೀಕರಿಸಿದ ಹದಿನೈದು ದಿನಗಳೊಳಗೆ ಅಥವಾ ಅಧ್ಯಕ್ಷನು ಸಾಕಷ್ಟು ಕಾರಣಕ್ಕಾಗಿ ಅನುಮತಿಸಬಹುದಾದಂಥ ಹೆಚ್ಚಿನ ಅವಧಿಯೊಳಗೆ ಹಾಗೆ ಒದಗಿಸಲು ತಪ್ಪಿದರೆ ಅಥವಾ ವಿಫಲನಾದರೆ, ಪರಿಷತ್ತು, ಅರ್ಜಿದಾರನು ಅನ್ಯಥಾ ಹೊಸ ಅರ್ಜಿ ಸಲ್ಲಿಸಲು ಅರ್ಹನಾಗಿದ್ದರೆ, ಆತನ ಅಂಥ ಹಕ್ಕಿಗೆ ಬಾಧಕವಾಗದಂತೆ ವ್ಯವಹರಣೆಗಳನ್ನು ಸಮಾಪನಗೊಳಿಸಬಹುದು. ಅರ್ಜಿದಾರನು, ಯಾರ ವಿರುದ್ಧ ಉಲ್ಲೇಖವನ್ನು ಉದ್ದೇಶಿಸಲಾಗಿದೆಯೋ ಅಂಥ ಖರೀದಿದಾರ ಅಥವಾ ಖರೀದಿದಾರರಿಗೆ ಏಕಕಾಲದಲ್ಲಿ ಉಲ್ಲೇಖದ ಒಂದು ಪ್ರತಿಯನ್ನು ಸಹ ಕಳುಹಿಸತಕ್ಕದ್ದು.

(6) ಉಲ್ಲೇಖ ಅಥವಾ ಅರ್ಜಿಯನ್ನು ಪರಿಷತ್ತಿನ ಕಚೇರಿಯಲ್ಲಿ ನೀಡಿದ್ದರೆ, ಕೂಡಲೇ ಆ ಬಗ್ಗೆ ಸ್ವೀಕೃತಿ ನೀಡತಕ್ಕದ್ದು ಉಲ್ಲೇಖ ಅಥವಾ ಅರ್ಜಿಯನ್ನು ನೋಂದಾಯಿತ ಅಂಚೆ ಮೂಲಕ ಸ್ವೀಕರಿಸಲಾಗಿದ್ದಲ್ಲಿ, ಅದೇ ದಿನದಂದು ಅದನ್ನು ಸ್ವೀಕರಿಸಿದ ಬಗ್ಗೆ ತಿಳಿಸತಕ್ಕದ್ದು ಅಧ್ಯಕ್ಷನು ಖರೀದಿದಾರನು ಅರ್ಜಿಯನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗೆ ಅಥವಾ ಅಧ್ಯಕ್ಷನು ಸಾಕಷ್ಟು ಕಾರಣಕ್ಕಾಗಿ ಅನುಮತಿಸಬಹುದಾದಂಥ ಹದಿನೈದು ದಿನಗಳನ್ನು ಮೀರದಂಥ ಹೆಚ್ಚಿನ ಅವಧಿಯೊಳಗೆ ಉಲ್ಲೇಖಕ್ಕೆ ತನ್ನ ವಿವರವಾದ ಉತ್ತರವನ್ನು ನೀಡುವಂತೆ ಖರೀದಿದಾರನಿಗೆ ತಿಳಿಸತಕ್ಕದ್ದು.

(7) ಅಧಿನಿಯಮದ 18ನೇ ಪ್ರಕರಣದಡಿ ಉಲ್ಲೇಖವನ್ನು ಸ್ವೀಕರಿಸಿದ ತರುವಾಯ, ಪರಿಷತ್ತಿನ ಅಧ್ಯಕ್ಷನು ಉಲ್ಲೇಖ ಮತ್ತು ಅದಕ್ಕೆ ಖರೀದಿದಾರರು ನೀಡಿರುವ ಪ್ರತಿಕ್ರಿಯೆಯನ್ನು ಪರಿಶೀಲಿಸುವಂತೆ ತಿಳಿಸತಕ್ಕದ್ದು ಮತ್ತು ಇದು ಮೇಲ್ನೋಟಕ್ಕೆ ವಿಳಂಬ ಸಂದಾಯದ ಪ್ರಕರಣವೆಂದು ಸಾಬೀತಾಗುತ್ತದೆಂದು ಮನದಟ್ಟಾದ ತರುವಾಯ ಅದನ್ನು ಪರಿಷತ್ತಿನ ತಕ್ಷಣದ ನಂತರದ ಸಭೆಯಲ್ಲಿ ಪರಿಗಣನೆಗಾಗಿ ಮಂಡಿಸುವಂತೆ ಮಾಡತಕ್ಕದ್ದು. ಅಧ್ಯಕ್ಷನು ಪರಿಷತ್ತಿನ ಹಿಂದಿನ ಸಭೆಯ ದಿನಾಂಕದಿಂದ ಎರಡು ವಾರಗಳೊಳಗೆ ಸ್ವೀಕರಿಸಲಾದ ಪ್ರತಿಯೊಂದು ಉಲ್ಲೇಖವನ್ನು ಪರಿಶೀಲಿಸಲಾಗಿದೆಯೆಂದು ಮತ್ತು ಕ್ರಮವಾಗಿರುವುದೆಂದು ಕಂಡು ಬಂದರೆ, ಪರಿಷತ್ತಿನ ನಂತರದ ತಕ್ಷಣದ ಸಭೆಯಲ್ಲಿ ಪರಿಗಣನೆಗಾಗಿ ಮಂಡಿಸುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

(8) ಪರಿಷತ್ತು ತನ್ನ ಮುಂದೆ ಇಡಲಾದ ಪ್ರತಿ ಉಲ್ಲೇಖಕ್ಕೆ ಸಂಬಂಧಿಸಿದಂತೆ ಸ್ವತಃ ತಾನೇ ಸಂಧಾನ ನಡೆಸತಕ್ಕದ್ದು ಅಥವಾ ಸಂಧಾನ ನಡೆಸುವುದಕ್ಕಾಗಿ ಪರ್ಯಾಯ ವಿವಾದ ಪರಿಹಾರ ಸೇವೆಗಳನ್ನು ಒದಗಿಸುವ ಯಾವುದೇ ಸಂಸ್ಥೆ ಅಥವಾ ಕೇಂದ್ರಕ್ಕೆ ತಿಳಿಸಿ ಸಂಧಾನಕ್ಕೆ ಅವುಗಳ ನೆರವನ್ನು ಕೋರತಕ್ಕದ್ದು. ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996 ರ 65 ರಿಂದ 81ರ ವರೆಗಿನ ಪ್ರಕರಣಗಳ ಉಪಬಂಧಗಳನ್ನು ಸಂಧಾನವನ್ನು ಆ ಅಧಿನಿಯಮದ ಖಖಖನೇ ಭಾಗದಡಿಯಲ್ಲಿ ಪ್ರಾರಂಭಿಸಿದ್ದಿದ್ದರೆ ಹೇಗೋ ಹಾಗೆ ಅಂಥ ಉಲ್ಲೇಖಕ್ಕೆ ಅನ್ವಯಿಸತಕ್ಕದ್ದು.

(9) ಪರಿಷತ್ತು ಅಥವಾ ಅರ್ಜಿಯನ್ನು ಸಂಧಾನಕ್ಕಾಗಿ ಯಾವ ಸಂಸ್ಥೆಗೆ ಒಪ್ಪಿಸಲಾಗಿದೆಯೋ ಆ ಸಂಸ್ಥೆಯು ಈ ಬಗ್ಗೆ ಪೂರೈಕೆದಾರ ಹಾಗೂ ಖರೀದಿದಾರ ಇಬ್ಬರಿಗೂ ನೋಟೀಸುಗಳನ್ನು ನೀಡಿ ತನ್ನ ಮುಂದೆ ಹಾಜರಾಗುವಂತೆ ಅಗತ್ಯಪಡಿಸತಕ್ಕದ್ದು. ಉಭಯ ಪಕ್ಷಕಾರರು ಹಾಜರಾದ ತರುವಾಯ, ಪರಿಷತ್ತು ಅಥವಾ ಸಂಸ್ಥೆಯು ಮೊದಲನೆಯದಾಗಿ ಖರೀದಿದಾರ ಮತ್ತು ಪೂರೈಕೆದಾರರ ನಡುವೆ ಸಂಧಾನ ನಡೆಸಲು ಪ್ರಯತ್ನಿಸತಕ್ಕದ್ದು ಸಂಸ್ಥೆಯು, ಪರಿಷತ್ತಿನಿಂದ ಉಲ್ಲೇಖ ಬಂದ ಹದಿನೈದು ದಿನಗಳೊಳಗೆ ಅಥವಾ ಪರಿಷತ್ತು ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ಪರಿಷತ್ತಿಗೆ ತನ್ನ ವರದಿಯನ್ನು ಸಲ್ಲಿಸತಕ್ಕದ್ದು.

(10) ಅಂಥ ಸಂಧಾನದಿಂದ ವಿವಾದದ ಇತ್ಯರ್ಥವಾಗದಿದ್ದರೆ, ಪರಿಷತ್ತು ವಿವಾದದ ಅಂತಿಮ ಇತ್ಯರ್ಥಕ್ಕಾಗಿ ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996ರ ಉಪಬಂಧಗಳಿಗನುಸಾರವಾಗಿ ಸ್ವತಃ ತಾನೇ ಮಧ್ಯಸ್ಥಿಕೆದಾರನಾಗಿ ಕಾರ್ಯ ನಿರ್ವಹಿಸತಕ್ಕದ್ದು ಅಥವಾ ಅಂಥ ಮಧ್ಯಸ್ಥಿಕೆಗಾಗಿ ಒಂದು ಸಂಸ್ಥೆಗೆ ಅದನ್ನು ಒಪ್ಪಿಸತಕ್ಕದ್ದು ಪೂರೈಕೆದಾರ ಅಥವಾ ಖರೀದಿದಾರನು. ಖುದ್ದಾಗಿ ಅಥವಾ ತನ್ನ ವಕೀಲನ ಮೂಲಕ ಮಧ್ಯಸ್ಥಿಕೆ ವ್ಯವಹರಣೆಗಳ ಅವಧಿಯಲ್ಲಿ ಪರಿಷತ್ತು ಅಥವಾ ಸಂಸ್ಥೆಯ ಮುಂದೆ ತನ್ನ ಪ್ರಕರಣವನ್ನು ಮಂಡಿಸಬಹುದು ಸಂಸ್ಥೆಯು ಪರಿಷತ್ತಿಗೆ ಅದು ಗೊತ್ತುಪಡಿಸಬಹುದಾದಂಥ ಸಮಯದೊಳಗೆ ತನ್ನ ವರದಿಯನ್ನು ಸಲ್ಲಿಸತಕ್ಕದ್ದು.

(11) ಪರಿಷತ್ತಿನ ಯಾವುದೇ ನಿರ್ಣಯವನ್ನು ಅದರ ಸಭೆಯಲ್ಲಿ ಹಾಜರಿರುವ ಸದಸ್ಯರ ಬಹುಮತದ ಮೂಲಕ ಕೈಗೊಳ್ಳತಕ್ಕದ್ದು.

(12) ಪರಿಷತ್ತು ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996ರ 31ನೇ ಪ್ರಕರಣಕ್ಕನುಸಾರವಾಗಿ ಮತ್ತು ಅಧಿನಿಯಮದ 18ನೇ ಪ್ರಕರಣದ (5)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಸಮಯದೊಳಗೆ ಐತೀರ್ಪನ್ನು ನೀಡತಕ್ಕದ್ದು. ಐತೀರ್ಪನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಸಂಬಂಧಪಟ್ಟ ಕಾನೂನಿಗನುಸಾರವಾಗಿ ಜಾರಿ ಮಾಡತಕ್ಕದ್ದು. ಐತೀರ್ಪಿನ ಪ್ರತಿಗಳನ್ನು, ಅರ್ಜಿಯನ್ನು ಸಲ್ಲಿಸಿದ ಏಳು ದಿನಗಳೊಳಗೆ ಲಭ್ಯವಾಗುವಂತೆ ಮಾಡತಕ್ಕದ್ದು.

(13) ಅಧ್ಯಕ್ಷ ಅಥವಾ ಅಧ್ಯಕ್ಷನಿಂದ ಪ್ರಾಧಿಕೃತನಾದ ಯಾರೇ ಇತರ ಅಧಿಕಾರಿಯು, ಪರಿಷತ್ತಿನ ವಾರ್ಷಿಕ ಪ್ರಗತಿ ವರದಿಯೂ ಸೇರಿದಂತೆ ಪರಿಷತ್ತಿನ ಪ್ರತಿಯೊಂದು ಸಭೆಯ ನಡವಳಿಗಳನ್ನು ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿಗೆ ಕಳುಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಂ. ಶಿವಲಿಂಗಸ್ವಾಮಿ**
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ.

The above translation of the Karnataka State Micro and Small Enterprises Facilitation Council Rules 2007 shall be authoritative text in the Kannada Language under section 5A of the Karnataka Official Language Act, 1963.

GOVERNOR OF KARNATAKA

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.352

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.